Regd No Bo 155

14-10-1969

SATYAVADI Daily MYSORE 4 ★ 53 rd Year of Publication

ಸತ್ಯವಾದಿ ಪತ್ರಿಕೆಯ ಮಹೋತ್ಸವ ನಡೆವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಸುನೆ ಸಿರಸ್ತೇದಾರ್ ಎಂ. ವಿ ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಚಂಡೀಘರ್‌ನಲ್ಲಿ ಸಾಮೂಹಿಕ ಪ್ರದರ್ಶನ

ಮುಷ್ಕರ

ರಾಬರ್ಟ್‌ಸನ್‌ಪೇಟೆ— 20 ದಿವಸಗಳಿಂದ ಮುಷ್ಕರಿಸಿರುವ ನಂ ೨ ಚಿದ್ರುರ್ಗ ಗಣಿಯ 427 ಮೆಷೀ ಕೆಲಸಗಾರರ ಸಹಾನುಭೂತಿಗಾಗಿ ಗಣಿಯ 4500 ಕೆಲಸಗಾರರು ನ್ನೆ ಕೆಲಸಕ್ಕೆ ಹೋಗಲಿಲ್ಲ.

○

ತೆಂಗು ಅಭಿವೃದ್ಧಿ

ಮಂಗಳೂರು— ರೂ 47 40 ಲಕ್ಷದ ತೆಂಗು ಅಭಿವೃದ್ಧಿ ಸ್ಕೀಮನ್ನು ವ್ಯವಸಾಯ ಮಂತ್ರಿ ಶ್ರೀ ರಾಚಯ್ಯನವರು ಉದ್ಘಾಟಿಸಿದರು — 3000 ಎಕ್ರೆಯಲ್ಲಿ ತೆಂಗು ಬೆಳೆ ವಿಸ್ತರಿಸಲಾಗುವುದು — ರಾಜ್ಯವು 27000 ಎಕ್ರೆಗಳಲ್ಲಿ 45 ಕೋಟಿ ತೆಂಗು ಬೆಳೆಯಲಾಗುತ್ತಿದೆಯೆಂದೂ, ಇದು 30 ಸಾವಿರ ಎಕ್ರೆಗಾದರೂ ಹೆಚ್ಚಲೇಬೇಕೆಂದೂ ಮಂತ್ರಿಗಳು ಆಶಿಸಿದರು.

●

ಮೈಸೂರಿನವರಾಗಲಿ

ಬೆಂಗಳೂರು— ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಸ್ಥಾನಕ್ಕೆ ಮೈಸೂರಿನವರು ಆರಿಸಲ್ಪಡಬೇಕೆಂದು ವಿರೋಧ ನಾಯಕರೂ ಸೆನೇಟು ಸದಸ್ಯರೂ ಆದ ಶ್ರೀ ಶಿವಪ್ಪನವರು ಹೇಳಿದರು.

○

ನಂಬೂದಿರಿಪಾದರು ಬಂದರು

ತ್ರಿವೇಂದ್ರಂ — ಪೂರ್ವ ಜರ್ಮನಿಯಲ್ಲಿ ಚಿಕಿತ್ಸೆ ಮತ್ತು ವಿಶ್ರಾಂತಿ ನಂತರ ಆಗಮಿಸಿದ ಮುಖ್ಯಮಂತ್ರಿ ನಂಬೂದರಿಪಾದರಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು — ಹೂವಿನ ಹಾರಗಳಲ್ಲಿ ಮುಳುಗಿಸಿದರು.

●

ಪಾನನಿರೋಧ ರದ್ದು

ಹೈದರಾಬಾದು — ಪಾನನಿರೋಧವು ಆಂಧ್ರ ಭಾಗದಲ್ಲಿ ನವೆಂಬರು 1 ರಿಂದ ತೆಗೆಯಲಾಗುವುದು — ಇದರಿಂದ ರೂ 15 ರಿಂದ 20 ಕೋಟಿ ವರ್ತಮಾನ ಸರ್ಕಾರಕ್ಕೆ ದೊರೆಯುವುದು.

★

ಹುಡುಗನಾಪತ್ತೆ

ಜೋಧಪುರ— ಮಾರ್ಚಿಯಿಂದ ಕಾಣೆಯಾಗಿರುವ 15 ವರ್ಷದ ಒಬ್ಬ ಹುಡುಗನನ್ನು ಪೋಲೀಸರು ಹುಡುಕುತ್ತಿದ್ದಾರೆ. ಒಬ್ಬ ಬಂಗಾಳಿ ದಿವ್ಯಜ್ಞಾನ ಮಹಿಳೆಯು ಹುಡುಗನನ್ನು ಒಬ್ಬ ಸಾಧು ತನ್ನ ಶಿಷ್ಯನನ್ನಾಗಿ ಮಾಡಿಕೊಳ್ಳಲು ಅಪಹರಿಸಿ, ಅವ ತಲೆಯನ್ನು ಬೋಳಿಸಿ, ಒಂದು ಮರದ ಕೆಳಗೆ ಕೂರಿಸಿರುವನೆಂದೂ ತನ್ನ ಜ್ಞಾನ ದೃಷ್ಟಿಯಿಂದ ತಿಳಿಸಿರುವಳು ; ಈ ಸುಳಿವನ್ನು ಅನುಸರಿಸಿ ಪೋಲೀಸರು ಸಾಧು ಸನ್ಯಾಸಿಗಳ ಸ್ಥಳಗಳಲ್ಲಿ ಹುಡುಕುತ್ತಿದ್ದಾರೆ.

★

ಪತ್ರಿಕೆ ಕಚೇರಿಗಳ ಮೇಲೆ ಧಾಳಿ

ಇಂಡೋರು— ಎಂಬೈ ಆಸ್ಪತ್ರೆಯಲ್ಲಿ ಒಬ್ಬ ಹುಡುಗಿಗೆ ನೀಡಿದ ಔಷಧೋಪಚಾರದ ಕುಂದುಕೊರತೆ ವಿರುದ್ಧ ಪ್ರಕಟಿಸಿದ ಸ್ವದೇಶ್ ಮತ್ತು ನವಭಾರತ ಪತ್ರಿಕೆ ಆಫೀಸುಗಳಿಗೆ 300 ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ನುಗ್ಗಿ, ಪೀಠೋಪಕರಣ ಫೈಲುಗಳು ಮುಂತಾದುವುಗಳನ್ನು ನಷ್ಟ ಪಡಿಸಿ ಅಲ್ಲಿದ್ದವರನ್ನು ಹೊಡೆದುಬಡಿದರು

★

ಸಾಮೂಹಿಕ ಪ್ರದರ್ಶನ

ಚಂಡೀಘರ— 'ಪಂಜಾಬಿಗಾಗಿರುವ ಅನ್ಯಾಯ" ವಿರುದ್ಧ ತಾ|| 17 ರಂದು ಸಂತ್ ಫತೇಸಿಂಗ್‌ರ ನೇತೃತ್ವದಲ್ಲಿ ಸಾಮೂಹಿಕ ಪ್ರದರ್ಶನ ನಡೆಸಲು ಏಳು ಪಕ್ಷಗಳ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

★

ಮಾವೋ ಹಸ್ತಪತ್ರ

ಷಿಲಾಂಗು— ಮಾವೋ ಫೋಟೋ ಇರುವ ಚೀನಿ ಹಸ್ತಪತ್ರಗಳು ಬಹಳ ಸ್ಥಳಿಯಲ್ಲಿ ನುಫಾರ್ಮಿಟ್ ಮತ್ತು ಲಕ್ಷ್ಮೀಪುರ ಜಿಲ್ಲಾ ಭಾಗಗಳಲ್ಲಿ ಜಿಲ್ಲಾ ಆಡಳಿತಗಾರರಿಂದ ಶೇಖರಿಸಲಾಗುತ್ತಿದೆ.

○

ಅಲ್ಲೂ ಮತೀಯ ಕಲಹ

ಬೆಲ್ಫಾಸ್ಟ್ (ಉತ್ತರ ಐರ್ಲೆಂಡು)— ಇಲ್ಲಿ ಮುತ್ತೂ ಮತೀಯ ಹಿಂಸಾಕೃತ್ಯಗಳು ಪ್ರಾರಂಭವಾದಾಗ ಹಾಡುತ್ತಾ ಬಂದ 1000 ಮಂದಿ ಕುಪಿತ ಪ್ರಾಟಿಸ್ಟೆಂಟರ ಗುಂಪನ್ನು ಚದುರಿಸಲು ಬ್ರಿಟಿಷ್ ಸೈನಿಕರು ಅಶ್ರುವಾಯು ಪ್ರಯೋಗಿಸಿದರು.

★

ಜೀವಸಹಿತ ಸುಟ್ಟರು

ಮೆಹಸಾನಾ— ಒಂದು ಸಾರ್ವಜನಿಕ ಕಕ್ಕಸ್ಸಿನಲ್ಲಿ ದೇಕಾಬಾಯಿ ಎಂಬ ಹರಿಜನಳನ್ನು ಜೀವಸಹಿತ ಸುಟ್ಟ ಪ್ರಕರಣ ವರದಿಯಾಗಿದೆ — ಪೋಲೀಸು ತನಿಖೆ ನಡೆಯುತ್ತಿದೆ - ಈ ಮಧ್ಯೆ ತಾ|| ರವರೆಗೆ ಕೊಡಲಾಗಿದ್ದ ಪಟ್ಟಾಕ್ಕೆ ಮುಂತಾದರ ಲೈಸನ್ಸನ್ನು ಜಿಲ್ಲಾಧಿಕಾರಿಗಳು ಸಸ್ಪೆಂಡು ಮಾಡಿ

ಪದವಿ ಬಿಡುವುದಿಲ್ಲ

ನವದೆಹಲಿ— ತನ್ನ ಟೀಕಾಕಾರರ ಕೇಳಿಕೆ ಮನ್ನಿಸಿ ತಾವು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ಕೊಡುವ ಇಚ್ಛೆ ಹೊಂದಿಲ್ಲವೆಂದು ಶ್ರೀ ನಿಜಲಿಂಗಪ್ಪನವರು ಹೇಳಿದರು.

★

ಪಿ ಎಲ್ 480

ನವದೆಹಲಿ— ಹೊಸ ಪಿ ಎಲ್ 480 ಒಪ್ಪಂದದಂತೆ ಅಮೇರಿಕಾ ಭಾರತಕ್ಕೆ 300 ಮಿಲಿಯ ಟ್ಟ ಗೋಧಿ, 100000 ಬೇಲು ಹತ್ತಿ, 95000 ಟ್ಟ ವನಸ್ಪತಿ ತೈಲ ಸರಬರಾಜು ಮಾಡಲಿದೆ.

★

ಹೆಸರು ಬದಲಾವಣೆಗೆ

ಮಧುರೈ— ಆಂಡಮಾನ್, ನಿಕೋಬಾರ್ ದ್ವೀಪಗಳ ಹೆಸರನ್ನು ಷಾಹೀದ್, ಸ್ವರಾಜ್ ಎಂದು ಬದಲಾಯಿಸಲು ಕೇಂದ್ರ ಸರ್ಕಾರಕ್ಕೆ ತಮಿಳುನಾಡು ಭಾರತ ರಾಷ್ಟ್ರೀಯ ಸೈನ್ಯಕ್ಕೆ ಸಂಘೆ ಮನವಿಮಾಡಿಡೆ.

★

ಕನ್ನಡ ಚಳುವಳಿ

ಮಂಡ್ಯ— ಕನ್ನಡ ಚಳವಳಿಗಾರರೆಂದು ಹೇಳಲಾದ 2000 ಜನರ ಗುಂಪು ನಿನ್ನೆ ಕೆಲವು ಅಂಗಡಿಗಳಿಂದ ತಮಿಳು ಬೋರ್ಡುಗಳನ್ನು ಬಲಾತ್ಕಾರವಾಗಿ ತೆಗೆದುಹಾಕಿದರು ; ತೊಂದರೆಗೆ ಹೆದರಿ ಬಜಾರು ಭಾಗೂ ಅಂಗಡಿಗಳು ಮುಚ್ಚಲ್ಪಟ್ಟವು . ಪೋಲೀಸರು ಪರಿಸ್ಥಿತಿ ತಹಬಂದಿಗೆ ತಂದರು.

★

ಚಿನ್ನ ವಶ

ಬೊಂಬಾಯಿ— ಕಸ್ಟಂಸಿನವರು ರೂ. 6 5 ಲಕ್ಷ ವಶಪಡಿಸಿಕೊಂಡರು.

ಮೈಸೂರು ಸರ್ಕಾರ

(ಲೋಕೋಪಯೋಗಿ ಇಲಾಖೆ.)

ಡಸೇ ಕಾಲ್

ಟೆಂಡರ್ ಪ್ರಕಟನೆ

ನಂ. 3/ ಡಿ ಆರ್ ಬಿ/ ತಾ. 4-10-69

ಮಾಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ (ಲಕ್ಕೋಟೆಯ ಮೇಲೆ ಕೆಲಸದ ಹೆಸರನ್ನು ನಮೂದಿಸಿರಬೇಕು) ಈ ಕೆಳಗೆ ಕಂಡ ಕೆಲಸಗಳಿಗಾಗಿ ಆಹ್ವಾನಿಸಲಾಗಿದೆ.

1. ಕೆಲಸದ ಹೆಸರು :
   ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಕಬಿನಿ ಅಣೆಕಟ್ಟಿನ ಬಲ ದಂಡೆಯಲ್ಲಿ-ಪ್ರಾದೇಶಿಕ ಕಚೇರಿಯನ್ನು ನಿರ್ಮಾಣ ಮಾಡುವುದು
2. ಟೆಂಡರ್‌ಗೆ ಇಟ್ಟಿರುವ ಕೆಲಸದ ಭಾಗದ ಹಣ :
   ರೂ 8798/-
3. ಠೇವಣಿ 2½ ಯಂತೆ ಅರ್ನೆಸ್ಟ್ ಹಣದ ಠೇವಣಿ :
   ರೂ 220/-
4. ಕೆಲಸ ಮುಗಿಸಲು ನಿಗದಿಯಾದ ಕಾಲಾವಧಿ :
   6 (ಆರು) ತಿಂಗಳು
5. ಟೆಂಡರ್ ಫಾರಂಗಳ ಮೌಲ್ಯ :
   ರೂ 10/- ಮತ್ತು ಮಾರಾಟಕರ.
6. ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ತಾರೀಖು :
   18-10-69 ರಿಂದ 23-10-69
7. ವಿಭಾಗ ಕಚೇರಿಯಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲು ಕಡೆ ತಾರೀಖು ಮತ್ತು ವೇಳೆ
   24-10-69 ಸಂಜೆ 4 30 ರವರೆಗೆ.
8. ಕೆಲಸಕ್ಕಾಗಿ ಟೆಂಡರ್ ಸಲ್ಲಿಸಬೇಕಾದ ಕಂಟ್ರಾಕ್ಟರ್ ದರ್ಜೆ.
   4 ಮತ್ತು ಮೇಲ್ಪಟ್ಟು.

2 ಮೇಲೆ ವ್ಯಕ್ತಮಾಡಿರುವ ಮೌಲ್ಯವನ್ನು ಪಾವತಿ ಮಾಡಿ ಈ ಕಚೇರಿಯಿಂದ ಪಡೆದ ವಿಧಾಯಕವಾದ ಫಾರಂಗಳಲ್ಲಿ ಮಾತ್ರ ಟೆಂಡರುಗಳನ್ನು ಸಲ್ಲಿಸಬೇಕು. ಅಂಚೇ ಮೂಲಕ ಬೇಕಾದರೆ, ಅಂಚೆ ಮತ್ತು ಇತರ ವೆಚ್ಚಗಳಿಗಾಗಿ ಮುನಿಯಾರ್ಡರು ಮೂಲ್ಯ ಹೆಚ್ಚಾಗಿ ಎರಡು ರೂಪಾಯಿಗಳನ್ನು ಕಳಿಸಬೇಕು. ಟೆಂಡರು ಫಾರಂಗಳನ್ನು ರವಾನೆ ಮಾಡುವದರಲ್ಲಿ ಯಾವುದೇ ನಿಧಾನಕ್ಕೂ ಜವಾಬ್ದಾರಿಯನ್ನು ಒಪ್ಪಿಕೊಳ್ಳಲಾಗುವದಿಲ್ಲ ಮತ್ತು ಈಬಗ್ಗೆ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ. ಇದನ್ನು ಶಾಯಿನಲ್ಲಿ ಮಾತ್ರವೇ ಬರೆಯಬೇಕು.

3. ಅರ್ನೆಸ್ಟ್ ಹಣ ಇಲ್ಲದೆ ಸ್ವೀಕರಿಸಲಾದ ಟೆಂಡರುಗಳಿಗೆ ಗಮನಕೊಡುವುದಿಲ್ಲ. ಇ.ಎಂ.ಡಿ ಕೊಡಲು ವಿನಾಯಿತಿ ಹೊಂದಿರುವ ಯಶಸ್ವಿ ಟೆಂಡರುದಾರರುಗಳ ಸಂದರ್ಭದಲ್ಲಿ, ರಿಜಿಸ್ಟೇರ್ಡ ನಿಬಂಧನೆಗಳ ರೀತ್ಯಾ ಟೆಂಡರ್ ಸಲ್ಲಿಸುವಾಗ (ಖಾಯಂ ಠೇವಣಿಗಳನ್ನು ಠೇವಣಿ ಮಾಡುವುದು) ಒಪ್ಪಂದವನ್ನು ಮಾಡಿಕೊಳ್ಳುವ ಮೊದಲು ಭದ್ರತಾ ಠೇವಣಿ ಆಗಿ ಠೇ 2½ ಠೇವಣಿ ಮಾಡಬೇಕು.

4. ಯಾವುದೇ ಕಾರಣ ಕೊಡದೆ ಯಾವುದೇ ಅಥವಾ ಎಲ್ಲ ಟೆಂಡರುಗಳನ್ನೂ ತಿರಸ್ಕರಿಸುವ ಹಕ್ಕು ಟೆಂಡರುಗಳನ್ನು ವಿಲೇ ಮಾಡಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ವಿಾಸಲಾಗಿದೆ.

5. ಸಾಧ್ಯವಾದರೆ ಅದೇ ದಿನ ಟೆಂಡರ್‌ದಾರರ ಮುಂದೆ ಅಥವಾ ಒಡೆಯುವ ವೇಳೆಯಲ್ಲಿ ಹಾಜರಾಗಬಹುದಾದ ಅವರ ಪ್ರತಿನಿಧಿಗಳ ಮುಂದೆ ಟೆಂಡರುಗಳನ್ನು ಒಡೆಯಲಾಗುವದು.

6 ಕೆಲಸದ ವೇಳೆಯಲ್ಲಿ ಈ ಕಚೇರಿಯಿಂದ ಕೆಲಸಕ್ಕೆ ಸಂಬಂಧಿಸಿದಂತೆ ಹೆಚ್ಚು ವಿವರಗಳನ್ನು ಪಡೆಯಬಹುದು.

ಸಹಿ/ ಹೆಚ್. ವಿ. ಹಿರಣ್ಯ ಗೌಡ
ಎಕ್ಸಿಕ್ಯುಟಿವ್ ಎಂಜಿನಿಯರ್
ಕಬಿನಿ ಜಲಾಶಯ ವಿಭಾಗ
ಕಬಿನಿ ಕಾಲೊನಿ, ಮೈಸೂರು ಜಿಲ್ಲೆ.

ಎಐಸಿಸಿ

ಬೆಂಗಳೂರು— ಎಂಪಿಸಿಸಿ ಕಾರ್ಯಕಾರಿ ಸಮಿತಿ ಸಭೆಯು ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಕೇಂದ್ರ ಸರಕಾರ 14 ಹಿರಿಯ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದುದನ್ನು ಸ್ವಾಗತಿಸಿ ಇದರ ಈ ಕಾರ್ಯದಲ್ಲಿ ತಡವಾಗುತ್ತಿರುವ ಬಗ್ಗೆ ಚಿಂತೆ ವ್ಯಕ್ತಪಡಿಸಲಾಯಿತು — ಎಐಸಿಸಿ ಕಾಲಕಾಲಕ್ಕೆ ಮಾಡುತ್ತಿರುವ ಎಲ್ಲಾ ಪ್ರಗತಿ ನಿರ್ಧಾರಗಳನ್ನು ಜಾರಿಗೆ ತರಲು ಸಂಪೂರ್ಣ ಸಹಕಾರವನ್ನು ಒತ್ತಾಯ ಮಾಡಲಾಯಿತು — ಮುಂದಿನ ಶಾಸನಸಭಾಧಿವೇಶನಕ್ಕೆ ಮುಂಚೆ ಎಐಸಿಸಿ ಮತ್ತು ಕಾಂಗ್ರೆಸ್ ಪಾರ್ಟಿಯ ಕಾರ್ಯಕಾರಿ ಸಮಿತಿ ವಿಾಟಿಂಗುಗಳನ್ನು ನಡೆಸಿ, ರಾಜ್ಯದ ವಿವಿಧ ಭಾಗಗಳಲ್ಲಿ ಆಗಿರುವ ಅಭಿವೃದ್ಧಿ ಕುರಿತು ಪ್ರಕಟಿಸಲಾಗಿರುವ " ಏಕೀಕರಣ ನಂತರದ ಮೈಸೂರು " ಕಿರಿಹೊತ್ತಿಗೆಯ ಅಂಕಿಅಂಶ ಪರಿಶೀಲಿಸಲು ನಿರ್ಧರಿಸಲಾಯಿತು — ವಿಜಾಪುರದಲ್ಲಿ ನವೆಂಬರು 13 ರಿಂದ 15 ರವರಿಗೆ ರಾಜ್ಯಾಂಗ ತಿದ್ದುಪಡಿ ವಿಷಯ ಪರಿಶೀಲಿಸಲು ಒಂದು ರಾಜಕೀಯ ಸಮ್ಮೇಳನ ಮತ್ತು ಎಂಪಿಸಿಸಿ ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಲಾಯಿತು.

ಇದರಲ್ಲೇನು ರಹಸ್ಯವಿದೆಯೋ

ನವದೆಹಲಿ— ಲೋಕಸಭೆ ಸದಸ್ಯ ಅಬ್ದುಲ್ ಘನ್ನಿಧಾರ್ ಏರ್ಪಡಿಸಿದ್ದ ಭೋಜನದಲ್ಲಿ ಷೇಕ್ ಅಬ್ದುಲ್ಲರು ಪಾಕಿಸ್ತಾನ್ ಹೈಕಮಿಷನರೊಂದಿಗೆ ಮಾತುಕತೆ ನಡೆಸಿದರು — ಏನೆಂಬುದನ್ನು ತಿಳಿಸಲು ತಿರಸ್ಕರಿಸಿದರು.

ವುಡ್‌ಲಾಂಡ್ ತಾ. 10-10-69 ರಿಂದ
ಶಿ ನ್ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ 3 ಪ್ರದರ್ಶನಗಳು]

ಅಪೆರಾ— 10-10-69 ರಿಂದ
.... ಅಮೋಘ ತಮಿಳು ಚಿತ್ರ ....
ಎಂಗವೀಟ್ಟು ಪಿಳ್ಳೆ
ಪಿ ಲ್ಲ
ಪಾತ್ರ— ಎಂ. ಜಿ. ಆರ್ ಬಿ ಸರೋಜಾದೇವಿ ಎಸ್. ವಿ. ರಂಗರಾವ್
ನಾಗೇಶ್ ತಂಗವೇಲು (ಹೊಸ ಕಾಪಿ)
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಿಗಾಗಿ ನಡೆಯಲಿ
ಗೋರಕ್ಷಣಾಕ್ಕೆ ಚೆಂಜಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore